ಶ್ರೀ ಎಂ. ಎಸ್. ಕೃಷ್ಣನ್ :—ಯಾರಿಗಾದರೂ ಒಂದಕ್ಕಿಂತ ಹೆಚ್ಚಾಗಿ ಕಾರುಗಳನ್ನು ಕೊಟ್ಟಿದ್ದರೆ ಅಂಥವರಿಂದ ವಾಪಸು ಪಡೆಯುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಡಿ ದೇವರಾಜ ಅರಸ್ :—ವ್ಯಾಪಾರ ಮಾಡುವುದಾದರೆ, ಖರೀದಿ ಮಾಡಿ ತೆಗೆದುಕೊಳ್ಳೋಣ.

ಶ್ರೀ ಎಚ್. ಎಸ್. ಸಿದ್ದಪ್ಪ :—ಒಂದಕ್ಕಿಂತ ಜಾಸ್ತಿ ಕೊಟ್ಟು, ಅದನ್ನು ದುರುಪಯೋಗ ಮಾಡಿ ಕಾಳಸಂತೆಯಲ್ಲಿ ಮಾರಾಟ ಮಾಡಿದರೆ ಅಂಥವರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಡಿ. ದೇವರಾಜ ಅರಸ್ :—ಇಷ್ಟು ವರ್ಷ ಮಾರಬಾರದು ಎಂದು ನಿಯಮವಿದೆ. ಅದಕ್ಕೆ ಒಳಪಟ್ಟು ಮಾರಾಟ ಮಾಡಬೇಕಾದರೆ ಸರ್ಕಾರದ ಅನುಮತಿಯನ್ನು ಪಡೆಯಬೇಕು. ನಿಯಮ ಮೀರಿ ಮಾರಾಟ ಮಾಡಿದ್ದರೆ ಅಂಥವರ ಮೇಲೆ ಕ್ರಮ ತೆಗೆದು ಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ಕರಿಯಪ್ಪ :—ಶಾಸಕರು ಹಾಕಿರುವ ಅರ್ಜಿಗಳಲ್ಲಿ ಎಷ್ಟು ಬಾಕಿ ಇದೆ ಸ್ವಾಮಿ ?

ಶ್ರೀ ಡಿ. ದೇವರಾಜ :—ಇಲ್ಲಿ ಕೊಟ್ಟಿರುವ ಮಾಹಿತಿ ಪ್ರಕಾರ ೩೦ನೇ ಜೂನ್ ೧೯೭೨ರವರೆಗೂ ೧೪೪ ಅಪ್ಲಿಕೇಷನ್‌ಗಳು ಬಂದಿದ್ದು ಅದರಲ್ಲಿ ೯೨ ಜನರಿಗೆ ಕೊಟ್ಟಿದೆ. ಉಳಿದವು ಹಾಗೆಯೇ ಇವೆ. ಇದರ ಜೊತೆಗೆ ಈಚೆಗೆ ಬುದಿರುವ ಅರ್ಜಿಗಳೂ ಇರುತ್ತವೆ.

ಶ್ರೀ ಎಸ್. ಕರಿಯಪ್ಪ :—ಮುಂದಿನ ಅಲಾಟ್‌ಮೆಂಟ್ ಯಾವಾಗ ಮಾಡುತ್ತೀರಿ ?

ಶ್ರೀ ಡಿ. ದೇವರಾಜ ಅರಸ್ :—ಮೂರು ತಿಂಗಳಿಗೆ ಒಂದು ಸಲ ಅಲಾಟ್‌ಮೆಂಟ್ ನಡೆಯುತ್ತದೆ. ಮುಂದಿನ ಹಂಚಿಕೆಯಾಗುವಾಗ ಎಲ್ಲರಿಗೂ ಕೊಡುವುದಕ್ಕಾಗುವುದಿಲ್ಲ ಪ್ರಯಾರಿಟಿ ಬೇಸಿಸ್ ಮೇಲೆ ಕೊಡಲಾಗುತ್ತದೆ.

Madam Speker :—Question Mambers 456 and 602 may be taken up together

UPPER KRISHNA PROJECT

456. SRI MALLIKARJUN KHARGE (Gurmitkal).—

Will the Minister of State for Major Irrigation be pleased to state :—

(*a*) the amount provided in the budget of 1971—72 for the construction of Upper Krishna Project ;

(*b*) the amount spent for the said purpose

(*c*) the stage at which the work of the Upper Krishna Project is pending ;

(*d*) the total amount of compensation paid up till now towards acquisition of the lands ;

(*e*) the time required to complete the Upper Krishna Project ?

SRI D DEVARAJ URS (Chief Minister)

(*a*) Rs. 4.00 crores.

(*b*) (i) Cumulative expenditure up to end of March 1972 ... ... Rs. 1.½ crores

SRI D. DEVARAJ URS

(ii) During 1971—72 ... ... Rs. 4 crores

(c) 1st stage works of Narayanpur Dam, Almatti Dam and Narayanpur Left Bank Canal (12 Miles) are under progress

(d) Rs. 34.00 lakhs.

(e) Depends on availability of resources.

KARANJA AND UPPER KRISHNA PROJECTS

602. SRI D. B. KALMANKAR (Afzalpur).—

Will the Minister of State for Major Irrigation be pleased to state :

(a) whether the Government has discontinued the work on the Karanja Project and Upper Krishna Project :

(b) if so, the reasons for the same ?

SRI D. DEVARAJA URS (Chief Minister)

(a) No.

(b) Does not arise in view of reply to clause (a).

ಶ್ರೀ ಮಲ್ಲಿಕಾರ್ಜುನ ಖಾರ್ಗೆ :—ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಸಲುವಾಗಿ ಉತ್ತರ ಕೊಟ್ಟಿರುವ ಪ್ರಕಾರ ಹಿಂದಿನ ಸರ್ಕಾರ ೧೨ ಕೋಟಿ ರೂಪಾಯಿ ಖರ್ಚು ಮಾಡಿದೆ. ಈ ಸರ್ಕಾರ ನಾಲ್ಕು ಕೋಟಿ ರೂಪಾಯಿಗಳನ್ನು ಒದಗಿಸಿದೆ. ಈ ರೀತಿ ಮಾಡಿದರೆ, ನನಗನ್ನಿಸುತ್ತದೆ ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಗೋಲ್ಡನ್ ಜೂಬಿಲಿ ವೇಳೆಗೆ ಮುಗಿಯಬಹುದು, ಈಗ ಸಾಧ್ಯವಿಲ್ಲ ಎಂದು. ಆ ಭಾಗದಲ್ಲಿ ಬರಗಾಲ ಬಿದ್ದಿದೆ. ಅದರಸಲುವಾಗಿ ಲಗುವಾಗಿ ಎಲ್ಲ ಜನರಿಗೂ ನೀರಾವರಿ ಸೌಕರ್ಯಗಳನ್ನು ಕೊಡುವುದಕ್ಕಾಗಿ ಕೇಂದ್ರ ದಿಂದ ಸಹಾಯವನ್ನು ಪಡೆದು ಪ್ರತಿ ವರ್ಷ ೨೦ ಕೋಟಿ ರೂಪಾಯಿಗಳನ್ನಾದರೂ ಖರ್ಚು ಮಾಡಿ ಲಗುವಾಗಿ ಕೆಲಸ ಪೂರೈಸ ಬಹುದೋ ?

† ಶ್ರೀ ಡಿ. ದೇವರಾಜ ಅರಸ್ :—ಗೋಲ್ಡನ್ ಜೂಬಿಲಿ ವರೆಗೂ ಕಾಯುವುದಕ್ಕಾಗುವುದಿಲ್ಲ, ಸಿಲ್ವರ ಜೂಬಿಲಿ ಕಳೆಯುವುದರೆ ಬಳಗಾಗಿ ಮಾಡುವುದಕ್ಕೂ ಆಗುವುದಿಲ್ಲ. ಈ ಪ್ರಾಜೆಕ್ಟ್‌ಗಳಿಗೆ ಹೆಚ್ಚು ಹಣವನ್ನು ಒದಗಿಸುವುದಕ್ಕೆ ಹಣದ ತೊಂದರೆ ಇದೆ. ಇನ್ನೊಂದು ನೀರಿನ ವಿದ್ಯಮಾನಗಳ ವಿಚಾರವಾಗಿ ನಮಗೂ ಮತ್ತು ಆಂಧ್ರದವರಿಗೂ ಇಂಟಾದಂಥ ಜಿಜ್ಞಾಸೆ ವಿಚಾರದಲ್ಲಿ ಕೋರ್ಟಿಗೆ ಹೋಗಿರುವುದು ತಮಗೂ ಗೊತ್ತಿದೆ. ಅದೆಲ್ಲ ತೀರ್ಮಾನವಾಗಬೇಕು ಹಣದ ಅಭಾವ ಎಂದು ನಾನು ಮೊದಲೇ ಹೇಳಿದೆ. ಕೇಂದ್ರ ಸರ್ಕಾರದ ಸಹಾಯವನ್ನು ಕೇಳಿದರೆ, ನಿಮ್ಮ ಪಂಚವಾರ್ಷಿಕ ಯೋಜನೆಯಲ್ಲಿ ನೀವು ಎಷ್ಟು ಹಣ ಒದಗಿಸುತ್ತೀರಿ, ನಾವು ಒದಗಿಸತಕ್ಕ ಮೊತ್ತ ಎಷ್ಟು ಇದೆ. ಅದಕ್ಕಿಂತ ಹೆಚ್ಚಾಗಿ ಕೊಡುವುದಕ್ಕಾಗುವುದಿಲ್ಲ. ನೀವು ಈ ಯೋಜನೆಗಳಿಗೆ ಹೆಚ್ಚಾಗಿ ಹಣವನ್ನು ಖರ್ಚು ಮಾಡಬೇಕು ಎಂದರೆ ನಾವು ಕೊಡುವ ಮೊತ್ತದೊಳಗೆ ಹೆಚ್ಚಿ ಭಾಗವನ್ನು ಇದಕ್ಕೆ ಖರ್ಚು ಮಾಡಿ ಬೇರೆ ಯೋಜನೆಗಳನ್ನು ಬಿಡಿ ಎಂದು ಹೇಳುತ್ತಾರೆ.

ನಾವು ಈಗ ಪಂಚವಾರ್ಷಿಕ ಯೋಜನೆಗೆ ೩೫೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕು ಎಂದು ಇದ್ದರೆ, ಅದರಲ್ಲಿ ಕೇಂದ್ರ ಸರ್ಕಾರದವರು ಏನು ಹೇಳುತ್ತಾರೆ ಎಂದರೆ, ಇಂಥ ಪ್ರಾಜೆಕ್ಟ್‌ಗಳಿಗೆ ಪ್ರಯಾರಿಟಿ ಕೊಟ್ಟುಕೊಳ್ಳಿರಿ ಪ್ರಯಾರಿಟಿ ಕೊಟ್ಟುಕೊಂಡು ವರ್ಷ ವರ್ಷ ೨೦ ಕೋಟಿ ವ್ಯಯಿಸಿಕೊಳ್ಳಿ, ಆದರೆ ೩೫೦ ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗೆ ದುಡ್ಡು ಕೊಡುವುದಿಲ್ಲ ಎಂದು. ನಮ್ಮ